ಪ್ರೇಮಯಾತ್ರೆಗೆ ಸಮನಾಗುವುದು!

‘ಪ್ರಣಯಾಗ್ನಿ ಎದೆಯನ್ನು ಆವರಿಸಲು ಕಣ್ಣುಗಳಿಗೆ ಕತ್ತಲೆಯಿರುವುದೆ? ಒಲುಮೆ ಕಿಚ್ಚಿನ ಕೆಚ್ಚಿನ ಎದುರಿನಲ್ಲಿ ಭೀತಿ ಯಾವುದು? ಮತ್ತು ನಿನ್ನ ಬಳಿಯಲ್ಲಿ ನಾನು ಇರಲು ಕುಲೀನತೆಗೆ ಕುಂದಾಗುವುದೆ? ಹಿರಿದಾದ ಆಸೆಯ ಉರಿ ಮನಸ್ಸಿಗೆ ತಗುಲಿರಲು ಇಲ್ಲಿಗೆ ಬಂದೆ. ಅದಕ್ಕೆ ನೀನೆ ಗುರಿ!

‘ವೀರ ಯತಿಯೆ, ವಿಸ್ಮಯಕರವಾದುದಕ್ಕೆ ಬರಿದೆ ಭಯ ಪಡಬೇಡ. ನನ್ನ ಅಣ್ಣನು ಇಂದು ಬೆಳ್ಳಂಬೆಳಿಗ್ಗೆ ಹತ್ತಿರವಿರುವ ದೀರ್ಘವೂ ವಿಸ್ತಾರವೂ ಆದ ಕೊಳದ ದಡದಲ್ಲಿ ತಿರುಗಾಡಲು ಬಂದಿದ್ದನು. ಅವನು ನಿನ್ನ ಬಗ್ಗೆ ನನಗೆ ತಿಳಿಸಿದನು.

‘ಯತಿವೇಷದಿಂದಿರುವ ನನ್ನ ಆಸೆಯ ಅರ್ಜುನನೆ, ಪ್ರೇಮದ ತಪಸ್ಸು ಸಾಕ್ಷಾತ್ಕಾರಗೊಂಡಂತೆ ನೀನು ಇಲ್ಲಿಗೆ ಬಂದಿರುವುದನ್ನು ಕೇಳಿದೆನು. ನನ್ನ ಇಚ್ಛಾಲತೆಯು ಕುಡಿ ಹಬ್ಬುತ್ತ ನಿನ್ನ ಪಾದಗಳ ಬಳಿಗೆ ಬಂದಿದೆ. ವೀರ ಅರ್ಜುನದೇವನೆ, ನಾನು ಅಪರಿಚಿತೆಯಾದರೂ ನಿನ್ನ ಪ್ರೇಯಸಿಯಾಗಿರುವೆ. ನಾನು ಪ್ರಣಯ ಭಿಕ್ಷೆ ಬೇಡಿ ಬಂದಿದ್ದೇನೆ. ಸುಂದರಾಂಗನೆ ದಯೆ ತೋರಿ ನನ್ನನ್ನು ಅನುಗ್ರಹಿಸು.’

ಧೀರಾಂಗನೆಯ ಧೈರ್ಯದ ಆಲಾಪವನ್ನು ಕೇಳಿ ಕಿರೀಟಿಯ ಮುಖ ಕಮಲದಲ್ಲಿ ಕಿರುನಗೆ ಹೊಮ್ಮಿತು. ಸಂಕೋಚವೇನು ಎಂಬುದನ್ನೇ ತಿಳಿಯದವಳಂತೆ ನಿಂತಿದ್ದವಳ ಪುರುಷ ಭಂಗಿಯನ್ನು ನಿಡಿದಾಗಿ ದೃಷ್ಟಿಸುತ್ತ ‘ಸಾಹಸಿ ಕಿರಾತ ಕನ್ಯೆ!’ ಎಂದು ಹೇಳುತ್ತಿರಲು ‘ಅಲ್ಲಲ್ಲ’ ಎಂದು ಲಲನೆ ಹೇಳಿದಳು. ಆಗ ಧನಂಜಯನು,

‘ಅಲ್ಲದಿದ್ದರೆ ಪ್ರಣಯ ಪ್ರಸಂಗದಲ್ಲಿ ನಾಗರಿಕರು ಈ ರೀತಿ ವರ್ತಿಸುವರೆ? ಅದು ಹಾಗಿರಲಿ, ನೀನು ಬಂದ ಹಾದಿಯಲ್ಲಿಯೇ ಕ್ಷೇಮವಾಗಿ ಹಿಂತಿರುಗು. ಓ ಬನದ ಹೆಣ್ಣೆ, ಮುನಿಯ ಬೇಡ; ನಿಷ್ಕರುಣಿ ಎನ್ನಬೇಡ. ನಾನು ಅರ್ಜುನನೆಂಬುದು ನಿಜ. ನಾನು ಕಾರಣಾಂತರದಿಂದ ಬ್ರಹ್ಮಚರ್ಯ ವ್ರತವನ್ನು ಕೈಕೊಂಡು, ಯತಿವೇಷವನ್ನು ಧರಿಸಿ ಕ್ಷೇತ್ರದಿಂದ ಕ್ಷೇತ್ರಕ್ಕೆ ಭೂಯಾತ್ರೆಯನ್ನು ಮಾಡುತ್ತಿರುವೆನು.

‘ನನ್ನ ವ್ರತ ಮುಗಿಯದೆ, ನಿನ್ನ ಬಯಕೆಯು ಸಿದ್ಧಿಸದು. ವ್ರತದ ಆ ಮಾತಿರಲಿ; ಬನ ಹೆಣ್ಣೆ, ನನಗೆ ಸರಿ ಸಮನಾಗಿ ನಿನ್ನಲ್ಲೇನಿದೆ? ಮತ್ತು ನನ್ನ ಎದೆಗೆ ಹೂಬಾಣವಾಗಲು, ನೀನು ಯಾವ ರಾಜ ಕುಲಾಂಬುಧಿಯ ಮಥನದಲ್ಲಿ ಮೂಡಿರುವ ಕೌಸ್ತುಭ? ಹಾಗೂ ನಿನ್ನಲ್ಲಿ ಅದೇನು ಸೌಂದರ್ಯ ಸಂಪದವಿದೆ? ಈ ವಿಸ್ತಾರ ಲೋಕದಲ್ಲಿ ಕೇವಲ ಕನಿಷ್ಠರೆಂದರೂ ನಿನಗಿಂತಲೂ ಉತ್ತಮರು!’

ಸೋಲ್ತೊಮ್ಮೆ ಗೆಲ್ದಳಾಕೆ!

ಆ ನುಡಿ ಕೇಳಿ ಚಿತ್ರಾಂಗದೆಯ ಮಾನಕ್ಕೆ ಕಿಡಿಹೊತ್ತಿ ಉರಿಯಿತು. ಕೋಪ ಪ್ರದರ್ಶನವು ಪೌರುಷದ ಗುರುತೆಂದು ಬೆದರಿದಳು. ಕಂಬನಿಗರೆಯುತ್ತ ಒಮ್ಮೆ ಸೋತು, ಗೆದ್ದಳು! ಸ್ತ್ರೀಯ ಸಹಜ ಐಶ್ವರ್ಯ ದೇಸಿಲಕ್ಷಣವನ್ನು ಹೊಂದಿ ತಾನಾಗಿಯೇ ಶೋಭಿಸದಿದ್ದರೆ, ತನ್ನ ವಂಶವನ್ನು ತಿಳಿಸಿ ಕುಲಕ್ಕೆ ಮತ್ತೆ ಅವಹೇಳನವನ್ನುಂಟುಮಾಡಿ

## ಕಳೆದ ಸಂಚಿಕೆಯಲ್ಲಿ



ಮೃಗಯಾ ವಿನೋದವನ್ನು ಬಯಸಿ ಕಾಡಿಗೆ ಬಂದ ರಾಜಕುವರಿ ಚಿತ್ರಾಂಗದೆ, ಕಾಡಿನಲ್ಲಿ ಸಂಚಲನವನ್ನೇ ಉಂಟುಮಾಡಿದಳು. ಅವಳ ಚೆಲುವು ಹಿನ್ನೆಲೆಗೆ ಸರಿದು, ವೀರತ್ವವು ಮುನ್ನೆಲೆಗೆ ಬಂದಾಗ ವನ್ಯಮೃಗಗಳು ದಿಕ್ಕಾಪಾಲಾಗಿ ಓಡಿ ಚಂಚಲೆಯ ಕಣ್ಣಿನ ನೋಟದಿಂದ ದೂರ ಉಳಿಯಲು ಪ್ರಯತ್ನಿಸತೊಡಗಿದವು. ಮಾಯಾಮೃಗದಂತಹ ಜಿಂಕೆಯನ್ನು ಬೆನ್ನತ್ತಿ ಕಾಡಿನಲ್ಲಿ ಅಲೆಯತೊಡಗಿದ ಕನ್ನೆ, ಪ್ರಕೃತಿ ಸೌಂದರ್ಯಕ್ಕೆ ಮೈಮರೆತಳು. ದೂರ ದಿಗಂತದ ಗಿರಿಶಿರದಲ್ಲಿ ಎಳೆ ನೇಸರನು ಕಾಣಿಸಿಕೊಂಡ ಅದ್ಭುತವನ್ನು ಎವೆಯಿಕ್ಕದೆ ನೋಡುತ್ತಿದ್ದ ಆಕೆಯ ಕಣ್ಣಿಗೆ ಮತ್ತೊಂದು ಅದ್ಭುತ ಕಾಣಿಸಿತು – ಮೋಹನಾಕೃತಿಯ ಮಾನವಮೂರ್ತಿ. ಆ ಪುರುಷಾಕೃತಿಯ ದರ್ಶನ ಚಿತ್ರಾಂಗದೆಯ ಮನಸ್ಸಿನಲ್ಲಿ ಕಂಪನಗಳನ್ನು ಎಬ್ಬಿಸಿತು. ವಾಂಛೆಗಳನ್ನು ಬಡಿದೆಬ್ಬಿಸಿತು.

ಫಲವೇನು? ಎಂದುಕೊಂಡಳು.

ಅವಳು ಪ್ರಣಯಭಂಗಕ್ಕೆ, ಕಟು ತಿರಸ್ಕೃತಿಗೆ ಮನನೊಂದಳು. ಶೋಕ ಭಾರದಿಂದ ಕುಸಿದಳು. ಹೊಸೆದು ಎಸೆದ ಸುಗ್ಗಿ ಮೊಗ್ಗಿನ ರೀತಿ ಮುಖ ಕುಂದಿತು. ಮೌನವಾಗಿ ಬನದ ನಡುವಿನ ಶಿವನ ಗುಡಿಗೆ ಹಿಂದಿರುಗಿದಳು. ಹಠಾತ್ತಾಗಿ ಹೃದಯವನ್ನು ಶೂನ್ಯತೆ ತುಂಬಿತು. ಜಗತ್ತು ಶುಷ್ಕವೂ ನಿಷ್ಫಲವೂ ಆಗಿ ತೋರಿತು. ಪೂರ್ಣಿಮೆಯ ಬೆಳುದಿಂಗಳ ಸುಧಾಶ್ವೇತ ಅರಿವೆಯನ್ನು ಉಟ್ಟ ಮಧುರ ರಾತ್ರಿಯು ಶೂನ್ಯವಾಗಿ ಕಾಣುತ್ತಿತ್ತು. ಅವಳು ಹೊಸತಾಗಿ ಉಟ್ಟಿದ್ದ ಉಡಿಗೆ, ತೊಟ್ಟಿದ್ದ ತೊಡಿಗೆಗಳೇ ಸೆರೆಯ ಹೊರೆಯಾಗಿ ಬಿಗಿದುಕೊಂಡವು. ಚಿತ್ರಾಂಗದೆಯ ಶರೀರವನ್ನು ಅವು ಬೇಡಿಯ ಭಾರದಂತೆ ಬಿಗಿದವು. ರಾಣಿಯು ತನ್ನ ಅವಸ್ಥೆಗೆ ತಾನೇ ಹೇಸಿದಳು. ಅವಳಿಗೆ ಫಲ್ಗುಣನನ್ನು ಮೋಹಿಸುವ ಅಂದ ಸೌಂದರ್ಯದ ಮುಂದೆ ನೆಲದ ಸಿರಿ, ಬಿಲ್ವಿದ್ಯೆ, ಮೈ ಬಲ್ಮೆ, ರಣಕೀರ್ತಿ ಮತ್ತು ಅರಸು ಕುವರಿಯತನವು ತೃಣವಾಗಿ ಋಣವಾಗಿ ಕಾಣಿಸಿದವು.

ಚಿತ್ರಾಂಗದೆಯು ಮೈಗೆ ಹತ್ತಿಕೊಂಡಂತಿದ್ದ ಒಡವೆಗಳನ್ನು ತೆಗೆದೊಗೆದಳು. ದೇವಾಲಯದ ಜಗುಲಿಯಲ್ಲಿ ದಿಂಡುರುಳಿದಳು. ಮದನಹರ ಶಿವನ ಎದುರಿನಲ್ಲಿ ಕೈಮುಗಿದು ಮೈಚಾಚಿ ತುಂಬೆದೆಯ ಭಕ್ತಿಯಿಂದ ಉತ್ಕಂಠಿತ ಆತ್ಮದ ಆಕಾಂಕ್ಷೆಯಿಂದ ಮದನನ ಕೃಪೆಯುಂಟು ಮಾಡುವಂತೆ ಬೇಡಿಕೊಂಡಳು.

### ಯೌವನದ ಕಂಗಳಿಗೆ ಮನ್ಮಥನು ಪರಿಚಿತನೆ?

ಅವಳು ಮಾತುಗಳಿಂದ ಪ್ರಾರ್ಥಿಸಲಿಲ್ಲ; ಎದೆ ತುಂಬಿ ಬರಲು ನುಡಿಗಳಿಗೆ ತಾವೆಲ್ಲಿ? ವಾಕ್ ಸೀಮೆಯನ್ನು ದಾಟುತ್ತ ಆ ಮಹಾ ಆಕಾಂಕ್ಷೆಯ ಮಹತ್ತರ ಪ್ರಾರ್ಥನಾ ಬೆಳಕಿನ ಕಿರಣವು ದೀರ್ಘಭಾವ ಪ್ರವಾಹದ ಮೌನಮಾತ್ರವಾಗಿ ಪರಿಣಮಿಸಿತ್ತು!

ಚಿತ್ರಾಂಗದೆಯು ಹೀಗೆ ತಪೋನಿದ್ರೆಯಲ್ಲಿದ್ದುದು ಸ್ವಪ್ನವೊ ದರ್ಶನವೊ ಅಥವಾ ಸ್ವಪ್ನ ದರ್ಶನವೊ ಏನೆಂದು ಹೇಳಬಲ್ಲವರಾರು? ನಾರಿಯು ಕಣ್ಣ ಕತ್ತಲೆಯನ್ನು ಕೊಲೆಗೈಯುವ ಕಾಂತಿ ಪ್ರವಾಹವನ್ನು ಕಂಡಳು. ಆ ನಡುವೆ ಆಗಸದ ಕಡೆ ಕಾಮನಬಿಲ್ಲು ಪ್ರಕಾಶಿಸುವಂತೆ ಮಧುರ ಮದನನ ಮೂರ್ತಿ ರಾರಾಜಿಸಿತು. ಅದು ಚೆಲುವಾದ ನಗೆ ಮುಖದಲ್ಲಿ ಮಧು ವಿಲಾಸವನ್ನು ಬಿಂಬಿಸುತ್ತ ಪುಣ್ಯ ಪ್ರಸನ್ನವಾಗಿತ್ತು.

ಯೌವನದ ಕಣ್ಣುಗಳಿಗೆ ಮನ್ಮಥನು ಅಪರಿಚಿತನೆ? ದುಂಬಿಗೆ ತಾವರೆಯ ಹೃದಯ ಕಳಶದ ಜೇನಿನ ಔತಣಕ್ಕೆ ಕರೆ ಬೇಕೆ? ನೀರಿನ ಒಡಲ ಕಪ್ಪುಮುಗಿಲು ರಸದ ಒಜ್ಜೆಯಿಂದ ಬಸಿರ ಭಾರಕ್ಕೆ ಬಾಗಿ, ಪಶ್ಚಿಮ ದಿಗಂತದಲ್ಲಿ ಗಂಭೀರ ಗತಿಯಿಂದ ಮಿಂಚೆಸೆದು ಮೊಳಗುತ್ತದೆ. ಅದು ಮಲೆಯ ಬನಗಳ ಮೇಲೆ ಕರ‍್ರಗೆ ಉಬ್ಬುತ್ತ ಹಬ್ಬಿ ತೇಲಿ ಬರುತ್ತಿರಲು ಅದನ್ನು ಕಂಡು ಗಂಡು ನವಿಲು ಉನ್ಮಾದದಿಂದ ಗರಿಗಳನ್ನು ಕೆದರಿ ಅಟ್ಟಹಾಸದಿಂದ ಕೇಕು ಹಾಕುವುದು. ವರ್ಷಾಗಮನಕ್ಕೆ ಉಬ್ಬಿ ನರ್ತನ ಮಾಡುವುದು. ಅದರಂತೆ ಭಾವಜನನ್ನು ಸಂದರ್ಶಿಸಿದ ಚಿತ್ರಾಂಗದೆಯ ಹೃದಯ ನಲಿದು ಉಲಿದು ನರ್ತಿಸಿತು. ಅವಳು ಕಾಮದೇವನೊಡನೆ ಹೀಗೆ ಸಂಭಾಷಿಸಿದಳು:

‘ದೇವಮೂರ್ತಿಯೆ ನಮೋ! ನೀನು ಪಂಚಬಾಣನಲ್ಲವೆ? ನೀನು ರತಿರಮಣನು ಆಗಿಲ್ಲದಿದ್ದರೆ, ನನ್ನೆದೆ ಅದೇಕೆ ಹೀಗೆ ಚಿರಬಂಧುವಿನ ಸಂದರ್ಶನದಿಂದ ನಲಿಯುವಂತೆ—ಹೂವಿನ ಎಸಳಿನ ಮೇಲೆ ಕುಳಿತು ನಡುಗುವ ಬಣ್ಣದ ಚಿಟ್ಟೆಯ ರೆಕ್ಕೆಗಳ ರೀತಿ ನಡುಗುತ್ತಿದೆ?’

‘ನಾನು ಸೃಷ್ಟಿ ಮೂಲದ ಪ್ರಥಮನು. ನಾನೇ ಸ್ಫೂರ್ತಿ, ನಾನೇ ಹಿರಿಯ. ನಾನು ಕಾಮನಾಗಿ ಸುಖದುಃಖ ಪಾಶದಿಂದ ಜೀವರನ್ನು ಬಂಧಿಸುವೆನು! ಚಿರಯೌವನೋಲ್ಲಾಸ ನಿಧಿಯಾದ ನಾನು ಭುವನ ಹೃದಯದಲ್ಲಿ ಪ್ರೇಮ ಸೌಂದರ್ಯದ ವಿದ್ಯುತ್ ಪ್ರವಾಹವನ್ನು ಪ್ರಚೋದಿಸುತ್ತ, ಮೃತ್ಯು ಮುಪ್ಪು ಬೇಸರಗಳು ಆನಂದವನ್ನು ಕಡಿಮೆಯಾಗಿಸದಂತೆ